ಹಾಕಿರುತ್ತಿದ್ದ ಗೂಡಂಗಡಿಗಳ ಕಡೆ ಹೋಗುತ್ತಿದ್ದೆವು. ಕಾಫಿ – ಟೀ ಅಂಗಡಿ, ಮಂಡಕ್ಕಿ ಅಂಗಡಿ ಇತ್ಯಾದಿ ಇರುತ್ತಿದ್ದವು. ನಜೀರ್ ಮಾಡುವ ಖಾರಾಮಂಡಕ್ಕಿ ಬಲು ಸೊಗಸಾಗಿರುತ್ತಿತ್ತು. ಮಂಡಕ್ಕಿಗೆ ಈರುಳ್ಳಿ ಮತ್ತು ಖಾರ ಹಾಕಿ ಕೊಬ್ಬರಿ ಎಣ್ಣೆ ಹಾಕಿ ಕಲಸಿಕೊಡುತ್ತಿದ್ದ ಅದರ ರುಚಿ, ಘಮ ಇನ್ನೂ ಮರೆತಿಲ್ಲ. ನಾವು ಹೊಳೆಗೋಣಿಗೆ ಆಡಲು ಹೋದಾಗ ಆಗಾಗ ಟೆಂಟ್ ಬಳಿಯೂ ಹೋಗುತ್ತಿದ್ದೆವು. ಸಾಯಂಕಾಲದ ನಂತರ ಜನರಿಂದ ಗಿಜಿಗುಡುವ ಟೆಂಟ್ ಹಗಲಿನಲ್ಲಿ ನಿಶ್ಯಬ್ದವಾಗಿರುತ್ತಿತ್ತು. ಹೊರಗೆ ಅಂಗಡಿಗಳೂ ಖಾಲಿಯಾಗಿರುತ್ತಿದ್ದವು. ನಾವು ಟೆಂಟ್‌ನ ಹೊರಗಡೆ ಬಿದ್ದಿರುತ್ತಿದ್ದ ರೀಲ್‌ಗಳ ತುಂಡುಗಳನ್ನು ಹೆಕ್ಕಿ ತರುತ್ತಿದ್ದೆವು. ಶೆಟ್ಟರ ಅಂಗಡಿಯಲ್ಲಿ ಸಿಗುತ್ತಿದ್ದ ಬೈನಾಕ್ಯುಲರ್‌ನಂತಹುದರಲ್ಲಿ ಆ ರೀಲ್ ತುಂಡುಗಳನ್ನಿಟ್ಟು ಬೆಳಕಿಗೆ ಹಿಡಿದು ನೋಡಿದಾಗ ಆಕೃತಿಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ನಾವು, 'ಹೋ, ರಾಜ್‌ಕುಮಾರ್ ಕೇಡಿ ದಿನೇಶ್‌ಗೆ ಹೇಗೆ ಹೊಡೆಯುತ್ತಿದ್ದಾನೆ ನೋಡಿ' ಅಂತಲೋ, 'ಕುಂಬಾರ ತನ್ನ ಕೈ ಕಟ್ ಮಾಡಿಕೊಳ್ಳುತ್ತಿದ್ದಾನೆ' ಅಂತಲೋ ರೀಲ್ ನೋಡಿ, ಸಿನಿಮಾ ನೋಡಿದಷ್ಟೇ ಖುಷಿ ಪಡುತ್ತಿದ್ದೆವು. ಇಂತಹ ಸಣ್ಣಪುಟ್ಟ ಖುಷಿಗಳೆಲ್ಲಾ ಕಾಸು ಕೊಡದೆ ಪಡೆಯುವಂತಹುದಾಗಿದ್ದವು. ದುಬಾರಿ ಆಟದ ಸಾಮಾನುಗಳ ಬದಲು ನಾವೇ ಕಷ್ಟಪಟ್ಟು ಮಾಡಿ, ಆಟವಾಡಿ ನಲಿಯುವ ಸಂತೋಷ ನಮ್ಮದಾಗಿತ್ತು.

ಜಡಿಮಳೆಯ ಮಳೆಗಾಲದಲ್ಲಿ ತುಂಗೆ ತುಂಬಿ ಹೊಳೆಗೋಣಿಯನ್ನು ಆಕ್ರಮಿಸಿಬಿಡುತ್ತಿದ್ದಳು. ಮಳೆಗಾಲದ ದಿನಗಳ ಪ್ರಾರಂಭದಲ್ಲಿ ಮಾತ್ರ ಟೆಂಟ್ ಸಿನಿಮಾ ನಡೆಯುತ್ತಿತ್ತು. ಮಳೆಯ ರಭಸಕ್ಕೆ ಟೆಂಟ್ ಅಲ್ಲಲ್ಲಿ ಹರಿದುಹೋಗಿರುತ್ತಿತ್ತು. ಸಿನಿಮಾ ನೋಡುವಾಗ ಮಳೆ ಬಂತೆಂದರೆ ಟೆಂಟ್ ಒಳಗೂ ಮಳೆನೀರು! ಮೇಲೆ ವರ್ಷಧಾರೆ, ಕೆಳಗೆ ಕಾಲಬುಡದಲ್ಲಿ ಕೆಸರು–ಕೊಚ್ಚೆ. ಎಲ್ಲರೂ ಎದ್ದು ನಿಂತು ಬಟ್ಟೆ ಮುದುರಿಸಿಕೊಂಡು, ಕೊಡೆ ಬಿಡಿಸಿ ಹಿಡಿದು ಸಿನಿಮಾ ನೋಡುತ್ತಿದ್ದೆವು. ಯಾರದಾದರೂ ಕೊಡೆ ಅಡ್ಡ ಬಂತೆಂದರೆ ಅಲ್ಲೇ ಜಗಳ ಶುರು. ಮಳೆ ಜೋರಾಗಿ ತುಂಗೆಯ ನೀರು ಮೇಲೆ ಬರುವುದರೊಳಗೆ ಟೆಂಟನ್ನು ಕೀಳಲಾಗುತ್ತಿತ್ತು. ನಂತರ ಮಳೆಗಾಲ ಕಳೆದ ಮೇಲಷ್ಟೇ ಹೊಸದಾಗಿ ಹಾಕುತ್ತಿದ್ದ ಟೆಂಟ್‌ನಲ್ಲಿ ನಮಗೆ ಸಿನಿಮಾ ನೋಡುವ ಭಾಗ್ಯ.

ಹೊಳೆಗೋಣಿಯಲ್ಲಿ ಆಟವಾಡುವ ದಿನಗಳು ಬೇಸಿಗೆಯಲ್ಲಿ ಮಾತ್ರ. ನಮ್ಮ ಹೈಸ್ಕೂಲ್‌ಗೆ ಪ್ರತ್ಯೇಕ ಕ್ರೀಡಾಂಗಣ ಇರಲಿಲ್ಲವಾದ್ದರಿಂದ ಡ್ರಿಲ್, ಖೋಖೋ, ಥ್ರೋಬಾಲ್ ಮುಂತಾದ ಆಟಗಳಿಗೆಲ್ಲ ಹೊಳೆಗೋಣಿಗೇ ಹೋಗಬೇಕಾಗುತ್ತಿತ್ತು. ಮಳೆಗಾಲದಲ್ಲಿ ಮಾತ್ರ ಇದಕ್ಕೆಲ್ಲ ಆಸ್ಪದವಿರುತ್ತಿರಲಿಲ್ಲ. ಸ್ವಲ್ಪ ಮಳೆ ಬಂದರೂ ಗೊಚ್ಚೆರಾಡಿಯಾಗುವ ಹೊಳೆಗೋಣಿಯಲ್ಲಿ ಆಡಲು ಮನಸ್ಸಾಗುತ್ತಿರಲಿಲ್ಲ. ಮಳೆ ಯಾವಾಗ ಮುಗಿದು ಆಟವಾಡಲು ಹೊಳೆಗೋಣಿಗೆ ಓಡುತ್ತೇವೋ ಅಂತ ಕಾಯುವಂತಾಗುತ್ತಿತ್ತು. ಪ್ರವಾಹ ಬಂತೆಂದರೆ ಹೊಳೆಗೋಣಿ ತುಂಬಾ ತುಂಗೆಯ ಕೆಸರು ಬಣ್ಣದ ನೀರು! ಹೊಳೆಗೋಣಿಯ ಬುಡದಲ್ಲಿ ಮನೆ ಮಾಡಿದ್ದ ಬಡವರೆಲ್ಲಾ ತಾತ್ಕಾಲಿಕವಾಗಿ ಬೇರೆ ಕಡೆ ಬಿಡಾರ ಹೂಡಬೇಕಾಗುತ್ತಿತ್ತು. ಪ್ರವಾಹದಲ್ಲಿ ತೇಲಿಬರುವ ಮರದ ಕುಂಟೆಗಳನ್ನು ಹಿಡಿಯಲು ಕೆಲವರು ಹೋಗುತ್ತಿದ್ದರು. ಕಸ–ಕಡ್ಡಿಗಳ ಜೊತೆ ಕೆಲವೊಮ್ಮೆ ಮೇಯಲು ಬಿಟ್ಟಿದ್ದ ಜಾನುವಾರುಗಳು ಆಕಸ್ಮಿಕವಾಗಿ ಕಾಲು ಜಾರಿ ನೀರಿಗೆ ಬಿದ್ದು ಹೆಣವಾಗಿ ತೇಲಿಬರುತ್ತಿದ್ದವು.

ಬೇಸರವಾದಾಗಲೆಲ್ಲಾ ವಿಶಾಲ ಹೃದಯಿಯೊಬ್ಬ ಕೈ ಅಗಲಕ್ಕೆ ಚಾಚಿ ಕರೆದು ಅಪ್ಪುವಂತೆ,